**<u>ಸಾಕ್ಷಿಯನ್ನು ದಿಃ 04.08.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 28 ಮತ್ತು 29 ನೇ ಪ್ರತಿವಾದಿ ಪರ ಶ್ರೀ ಬಿ ಎ ಎಸ್ ವಕೀಲರಿಂದಃ-</u>**

ನಾನು ಈ ದಾವೆಯನ್ನು ಸರ್ವೆ ನಂಬರ್ 23 ರ 9 ಎಕರೆ 36 ಗುಂಟೆ ಗೆ ಸಂಬಂಧಿಸಿದಂತೆ ದಾವೆ ಹಾಕಿರುತ್ತೇನೆ . ಸದರಿ ಸರ್ವೆ ನಂಬರ್ 3 ಎಷ್ಟು ಪೋಡಾಗಿತ್ತು ಎಂದರೆ ಸಾಕ್ಷಿ 3 ಎಕರೆ 6 ಗುಂಟೆ , 2 ಎಕರೆ 17 ಗುಂಟೆ , 2 ಎಕರೆ 7.5 ಗುಂಟೆ , 2 ಎಕರೆ 7.5 ಗುಂಟೆ ಒಟ್ಟು 4 ಆಗಿರುತ್ತದೆ ಎಂದು ನುಡಿಯುತ್ತಾರೆ . ಕೇಸನ್ನು ಹಾಕುವಾಗ ವಾದ ಪತ್ರವನ್ನು ನಾವೆಲ್ಲರೂ ಅಂದರೆ ದೊಪ್ಪನ ಚಿಕ್ಕಪ್ಪನ ಮಕ್ಕಳೆಲ್ಲರೂ ಸೇರಿ ಬರೆಸಿರುತ್ತೇವೆ . ಯಾವ ಯಾವ ಸರ್ವೆ ನಂಬರ್ ಗೆ ಯಾವ ಯಾವ ಚೆಕ್ಕು ಬಂದಿ ಬರುತ್ತದೆ ಎಂದು ಬರೆಸಿರುತ್ತೇವೆ . 9 ಎಕರೆ 36 ಗುಂಟೆ ಯ ಚೆಕ್ಕು ಬಂದಿ , ದಕ್ಷಿಣಕ್ಕೆ ನಂದಿ ಲೇಔಟ್ , ಪಶ್ಚಿಮಕ್ಕೆ ಬೂದಿ ಸಿದ್ದ ಚೆನ್ನಮ್ಮನವರ ಜಮೀನು , ಉತ್ತರಕ್ಕೆ ಸಿದ್ದಲಿಂಗಯ್ಯ , ಪೂರ್ವಕ್ಕೆ ಪುಟ್ಟಮ್ಮ ವೈರಮುಡಿಯವರ ಜಮೀನು ಇರುತ್ತದೆ . ಸದರಿ ಚೆಕ್ಕು ಬಂದಿ ಯನ್ನು ದಾವಾ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ .

ದಾವಾ ಐಟಂ ನಂಬರ್ 3 ಒಟ್ಟು 4 ಎಕರೆ 15 ಗುಂಟೆ ಅದು ಈಗ 2 ಎಕರೆ 7.5 ಗುಂಟೆ ಮತ್ತು 2 ಎಕರೆ 7.5 ಗುಂಟೆ ಎಂದು ಪಹಣಿ ಆಗಿರುತ್ತದೆ . ಸರ್ವೆ ನಂಬರ್ 23/2 ರಲ್ಲಿ 6 ಎಕರೆ 30 ಗುಂಟೆ ಇತ್ತು . ಸರ್ವೆ ನಂಬರ್ 23/2 ರ ಖಾತೆ ಮೊದಲು ಶೇಕ್ ದಾವದ್ ಸುಫಿಯಾ ರವರ ಹೇಸರಿನಲ್ಲಿ ಇತ್ತು , ಅದಕ್ಕೂ ಪೂರ್ವದಲ್ಲಿ ಖಾತೆ ಅಬ್ದುಲ್ ಖಾದರ್ ರವರ ಹೆಸರಿನಲ್ಲಿ ಇತ್ತು . ಸದರಿ ಸೂಫಿಯಾ ಮತ್ತು ಅಬ್ದುಲ್ ಖಾದರ್ ಸೋಸೆ ಮತ್ತು ಮಾವ ಆಗಿರುತ್ತಾರೆ . ಸದರಿ ಸರ್ವೆ ನಂಬರ್ 23/2 ರಲ್ಲಿ 6 ಎಕರೆ 30 ಗುಂಟೆ ನೂರ್ ಜಾನ್ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ . ದಾವಾ ಹಾಕುವ ಪೂರ್ವದಲ್ಲಿ ಸದರಿ ಸ್ವತ್ತು ಯಾರ ಹೆಸರಿನಲ್ಲಿ ಇತ್ತು ಎಂದು ತಿಳಿದುಕೊಂಡೇ ಹಾಕಿರುತ್ತೇನೆ .

ನೂರ್ ಜಾನ್ ರವರ ಮಗನ ಹೆಸರು ರಿಜ್ವಾನ್ ಸಾಹೇಬ್ ಎಂದರೆ ಸರಿ . ಶೇಕ್ ದಾವುದ್ ಮತ್ತು ನೂರ್ ಜಾನ್ ಅಣ್ಣ ತಂಗಿ . ಶೇಕ್ ದಾವುದ್ ಮೊದಲನೇ ಪ್ರತಿವಾದಿ ಸೂಫಿಯಾ ರವರ ಗಂಡ ಎಂದರೆ ಸರಿ . ನೂರ್ ಜಾನ್ ರವರ ಹೇಳಿಕೆಯ ಮೇಲೆ ಅವರ ಅಣ್ಣ ಶೇಕ್ ದಾವುದ್ ಹೆಸರಿಗೆ 6 ಎಕರೆ 30 ಗುಂಟೆ ಖಾತೆ

ವರ್ಗಾವಣೆ ಆಗಿತ್ತು ಎಂದರೆ ಕೇಸ್ ಹಾಕುವಾಗ ಗೊತ್ತಾಗಿದ್ದು , ಅದನ್ನು ತಿಳಿದುಕೊಂಡ ನಂತರವೇ ಕೇಸನ್ನು ಹಾಕಿರುತ್ತೇನೆ ಎನ್ನುತ್ತಾರೆ .

ಎಂ ಆರ್ 1/1996-97 ರಂತೆ ಶೇಕ್ ದಾವುದ್ ರವರ ಹೆಸರಿಗೆ ಖಾತೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ಖಾತಾ ವರ್ಗಾವಣೆಯಾದ ನಂತರ ಅವರ ಹೆಂಡತಿ ಮೊದಲನೇ ಪ್ರತಿವಾದಿಗೆ 4 ಎಕರೆ 15 ಗುಂಟೆಯನ್ನು ಖಾತೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಅದರಂತೆ 1 ನೇ ಪ್ರತಿವಾದಿಯ ಹೆಸರಿಗೆ ಎಂ ಆರ್ 1/1997-98 ರಂತೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ .

ಸದರಿ 1 ನೇ ಪ್ರತಿವಾದಿಗೆ ಅಜ್ಗರ್ ಪಾಶ ಮತ್ತು ಅಕ್ಬರ್ ಪಾಶ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ . 1 ನೇ ಪ್ರತಿವಾದಿ ತನ್ನ ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿ ಅಜ್ಗರ್ ಪಾಶ ಮತ್ತು ಅಕ್ಬರ್ ಪಾಶ ಇಬ್ಬರಿಗೂ ತಲಾ 2 ಎಕರ 7.5 ಗುಂಟೆಯಂತೆ ಒಟ್ಟು 4 ಎಕರೆ 15 ಗುಂಟೆಯನ್ನು ನೊಂದಾಯಿತ ದಾನ ಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ದಾನ ಪತ್ರ ದಿಃ 16.06.2017 ರಲ್ಲಿ ನೊಂದಾಯಿತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯ ಆದಾರದ ಮೇಲೆ 3 ಮತ್ತು 4 ನೇ ಪ್ರತಿವಾದಿಗಳು ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಆ ಸಮಯದಲ್ಲಿ ತಡೆ ಹಾಕಿದ್ದೆವು ಎನ್ನುತ್ತಾರೆ . ದಾನ ಪತ್ರದ ಆಧಾರದ ಮೇಲೆ ಅವರ ಹೆಸರಿಗೆ ಖಾತೆ ಯಾಗಿರುತ್ತದೆ ಎಂದರೆ ಸರಿ . ಆಗ ಸರ್ವೆ ನಂಬರಿ 23/2 ಇದಿದ್ದು 23/3 ಮತ್ತು 23/4 ಎಂದು ಅವರ ಹೆಸರಿಗೆ ಪೊಡಾಗಿರುತ್ತದೆ ಎಂದರೆ ಸರಿ . ಅದರಂತೆ 3 ಮತ್ತು 4 ನೇ ಪ್ರತಿವಾದಿಯರೇ ಸದರಿ ಸ್ವತ್ತಿನ ಮಾಲೀಕರು ಹಾಗೂ ಸ್ವಾಧೀನದಲ್ಲಿ ಇದ್ದರೂ ಎಂದರೆ ಸರಿಯಲ್ಲ . ನಾವೇ ಸ್ವಾಧೀನದಲ್ಲಿ ಇದ್ದೆವು ಎನ್ನುತ್ತಾರೆ . 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಎಂ ಆರ್ 1/1996-97 ರ ಪ್ರಕಾರ ಖಾತೆಯಾದ ನಂತರ ನಾವೇ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ಏನಾದರೂ ದಾಖಲೆ ಹಾಕಿದ್ದೀರಾ ಎಂದರೆ ಸಾಕ್ಷಿ 2017 ರಲ್ಲಿ ನಮಗೆ ಪಿತ್ರಾರ್ಜಿತ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ . ಸರ್ವೆ ನಂಬರ್ 23/2 ರ 6 ಎಕರೆ 30 ಗುಂಟೆ ನೂರ್ ಜಾನ್ ರವರಿಗೆ ಸೇರಿದ್ದು ಅವರೇ ಸ್ವಾದೀನದಲ್ಲಿ ಇದ್ದರೂ ಎಂದರೆ ಸರಿಯಲ್ಲ .

ದಿಃ 28.04.2022 ರಲ್ಲಿ 29 ನೇ ಪ್ರತಿವಾಗೆ 3 ನೇ ಪ್ರತಿವಾದಿ 2 ಎಕರೆ 7.5 ಗುಂಟೆಯನ್ನು ಮಾರಾಟ ಮಾಡಿದ್ದರು ಎಂದರೆ ಅಷ್ಟರಲ್ಲಿ ನಾವು ಕೇಸನ್ನು ಹಾಕಿದ್ದೆವು , ಮಾರಾಟ ಮಾಡಿದ್ದು ನಮಗೆ ಗೊತ್ತಿಲ್ಲ ಅದೇ ದಿನಾಂಕ 4 ನೇ ಪ್ರತಿವಾದಿ ಕೂಡ ತನ್ನ ಹೆಸರಿಗೆ ಇದ್ದಂತಹ 2 ಎಕರೆ 7.5 ಗುಂಟೆಯನ್ನು 28 ನೇ ಪ್ರತಿವಾಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಗಳಂತೆ 28 ಹಾಗೂ 29 ನೇ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ . ಅದರಂತೆ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ . ಅದರಂತೆ ಅವರೇ ಕಂದಾಯ ಕಟ್ಟುಕೊಂಡು ಬರುತ್ತಿದ್ದಾರೆ ಎಂದರೆ ಇರಬಹುದು .

1996–97 ರಿಂದ 6 ಎಕರೆ 30 ಗುಂಟೆಗೆ ನಾನು ಕಂದಾಯ ಕಟ್ಟುತ್ತಿದ್ದೀರಾ ಎಂದರೆ ಸಾಕ್ಷಿ ಅವರ ಹೆಸರಿಗೆ ಖಾತೆ ಇರುವ ಕಾರಣ ಕಂದಾಯ ಕಟ್ಟುತ್ತಿಲ್ಲ . ನಮಗೆ 1996–97 ರಲ್ಲಿ ಅವರ ಹೆಸರಿಗೆ ಖಾತೆ ಇರುವ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ . ಆ ಸಮಯದಲ್ಲಿ ಕಂದಾಯ ಕಟ್ಟಲು ಹೋಗಿದ್ದಿರ ಎಂದರೆ ನನ್ನ ತಂದೆ ಹೋಗಿದ್ದರು ನಾನು ಹೋಗಿಲ್ಲ . ಹಾಗೆ ಕಂದಾಯ ಕಟ್ಟಲು ಹೋಗಿದ್ದು , ಖಾತೆ ಇಲ್ಲದ ಕಾರಣ ಕಟ್ಟಲು ಆಗಿಲ್ಲ ಎಂದು ನನ್ನ ಬಳಿ ಹೇಳಿಲ್ಲ . ನಮ್ಮ ತಂದೆ 2011 ರಲ್ಲಿ ತೀರಿಕೊಂಡಿರುತ್ತಾರೆ . ಸರ್ವೆ ನಂಬರ್ 23 ರಲ್ಲಿ 3 ಎಕರೆ 6 ಗುಂಟೆಯ ಭಾಗ ಕೊಟ್ಟಿದ್ದರು . ಸದರಿ ಸರ್ವೆ ನಂಬರ್ 23/1 ಆಗಿತ್ತು . ದಾವಾ ಐಟಂ ನಂಬರ್ 1 ನಮ್ಮ ಭಾಗಕ್ಕೆ ಬಂದಿರುವ ಕಾರಣ ಉಳಿದ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ನಮ್ಮ ಅಣ್ಣ ತಮ್ಮಂದೀರಿಗೆ ಇದೆ ಎನ್ನುತ್ತಾರೆ . ಹಾಗೆ ಭಾಗ ಆದ ವಿಚಾರವನ್ನು ದಾವ ಪತ್ರದಲ್ಲಿ ಬರೆಸಿಲ್ಲ . ದಾವಾ ಐಟಂ ನಂಬರ್ 3 ನಮ್ಮ ಭಾಗಕ್ಕೆ ಸೇರಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ .

ಪ್ರತಿವಾದಿ 28 ಮತ್ತು 29 ಕ್ರಯಕ್ಕೆ ಪಡೆದುಕೊಂಡ ನಂತರ ಲಕ್ಷಾಂತರ ರೂ. ಖರ್ಚು ಮಾಡಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ . 3 ಮತ್ತು 4 ನೇ ಪ್ರತಿವಾದಿಯವರಿಗೆ ಪ್ರತಿವಾದಿ 28 ಮತ್ತು 29 ರವರಿಗೆ ಮಾರಾಟ ಮಾಡಲು ಹಕ್ಕು ಇತ್ತು ಎಂದರೆ ಸರಿಯಲ್ಲ . ಪ್ರತಿವಾದಿ 28 ಮತ್ತು 29 ರವರು ಅಭಿವೃದ್ಧಿ ಪಡಿಸಿರುವುದನ್ನು ನೋಡಿ ಸದರಿ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಅದನ್ನು ಸೇರಿಸಿ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ . 28 ನೇ ಪ್ರತಿವಾದಿಯವರಿಗೆ ಸರ್ವೆ ನಂಬರ್ 23/4 ಎಂದು 29 ನೇ

ಪ್ರತಿವಾದಿಯವರಿಗೆ ಸರ್ವೆ ನಂಬರ್ 23/3 ಎಂದು ಖಾತೆ ಮುಂದುವರೆದುಕೊಂಡು ಹೋಗುತ್ತಿದೆ ಎಂದರೆ ನನಗೆ ತಿಳಿದಿಲ್ಲ .

ಈ ದಾವೆಯಲ್ಲಿ ಪ್ರತಿವಾದಿ 28 ಮತ್ತು 29 ರವರು ಏನು ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿಲ್ಲ . ಸದರಿ ರವರು ಖರೀದಿಸಿದ ಐಟಂ ನಂಬರ್ 3 ರ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ 28 ಮತ್ತು 29 ರವರೇ ಸ್ವಾಧೀನದಲ್ಲಿ ಇದ್ದು , ಅವರೇ ಸದರಿ ಸ್ವತ್ತಿನ ಮಾಲೀಕರು ಎಂದರೆ ಸರಿಯಲ್ಲ . 1996-97 ರಿಂದ ಇಲ್ಲಿಯವರೆಗೆ ದಾವಾ ಐಟಂ 3 ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರೀಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ . 2017 ರ ಆರ್ ಟಿ ಸಿ ಗಳನ್ನು ಆರ್ ಆರ್ 5 ದಾಖಲೆ ಹಾಜರು ಪಡಿಸಿರುತ್ತೇವೆ . ನನಗೆ ಓದಲು ಬರುತ್ತದೆ . ಗ್ರಾಮದ ನಮೂನೆ ಖೇತುವಾರು ನಿಪಿ.10 ನ್ನು ಹಾಜರು ಪಡಿಸಿರುತ್ತೇನೆ . ಸದರಿ ಖೇತುವಾರು ಯಾವ ವರ್ಷದ್ದು ಎಂದು ನಮೂದು ಇಲ್ಲ ಎಂದರೆ 1980 ರ ದಾಖಲೆ ಇರಬಹುದು ಆದರೆ ದಾಖಲೆಯಲ್ಲಿ ನಮೂದು ಇರುವುದಿಲ್ಲ ಎಂದು ದಾಖಲೆಯನ್ನು ಪರಿಶೀಲಿಸಿ ಹೇಳಿರುತ್ತಾರೆ . ನಾನು ಹಾಜರು ಪಡಿಸಿರುವ ದಾಖಲೆಗಳೆಲ್ಲ ನೂರ್ ಜಾನ್ ರವರಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ನಮ್ಮ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆಯೂ ಕೂಡ ಕೊಟ್ಟಿರುತ್ತೇವೆ ಎನ್ನುತ್ತಾರೆ . ಐಟಂ ನಂಬರ್ 3 ರ ಆಸ್ತಿ ಮೇಲೆ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.